ಒ ಎಸ್ 214/2022 ಪಿ.ಡಬ್ಲ್ಯೂ 1

ಇಂದು ದಿಃ 17.09.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ವಕೀಲರಿಂದಃ

ನಾನು ಮೈಸೂರಿನಲ್ಲಿ ವಾಸ ಇದ್ದೇನೆ. ನನ್ನ ತಾಯಿ ಹೆಸರು ಸಣ್ಣಮ್ಮ. ದಾವೆಯ ಉಳಿದ ವಾದಿಗಳು ನನಗೆ ಗೊತ್ತು. ಆ ಪೈಕಿ ಕೆಲವರು ಬಂಚಹಳ್ಳಿ ಹುಂಡಿ ಮತ್ತು ಹೆಗ್ಗಡಹಳ್ಳಿಯಲ್ಲ್ ವಾಸ ಇದ್ದಾರೆ. ಅವರು ಆರೋಗ್ಯವಾಗಿ ಚೆನ್ನಾಗಿ ಇದ್ದಾರೆ. ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುವ ಬಗ್ಗೆ ಅವರನ್ನು ಕೇಳಬೇಕು. ವಾದಿಗಳಿಗೆ ಆರೋಗ್ಯ ಇಲ್ಲ, ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ ಎಂದು ಹೇಳಿದ ಕಾರಣ ಅವರಿಂದ ನಾನು ಅಧಿಕಾರ ಪತ್ರ ಪಡೆದಿದ್ದೇನೆ ಎಂದರೆ ಸರಿ. ಅಧಿಕಾರ ಪತ್ರ ಬರೆಯುವ ಸಮಯದಲ್ಲಿ ಚೆನ್ನಾಗಿದ್ದರು ಎಂದರೆ ಚೆನ್ನಾಗಿರಲಿಲ್ಲ ಎನ್ನುತ್ತಾರೆ. ಜಮೀನು ವಿಚಾರಗಳು ವಾದಿಗಳಿಗೆ ಚೆನ್ನಾಗಿ ಗೊತ್ತು. 6ನೇ ಪ್ರತಿವಾದಿಯನ್ನು ನಾನು ನೋಡಿಲ್ಲ. ಅವರು ಕೆಂಪಿಸಿದ್ದನಹುಂಡಿಯವರೆಂದು ಕೇಳಿದ್ದೇನೆ. ಅವರು ಯಾವ ಸರ್ವೆ ನಂಬರಲ್ಲಿ ಎಷ್ಟು ಆಸ್ತಿ ಖರೀದಿಸಿದ್ದರು ಎಂದರೆ ನಾನು ತಿಳಿದುಕೊಂಡ ಪ್ರಕಾರ 261/4 ರಲ್ಲಿ 1 ಎಕರೆ 39 ಗುಂಟೆ ಖರೀದಿಸಿದ್ದಾರೆ. 6ನೇ ಪ್ರತಿವಾದಿ ಆಸ್ತಿ ಖರೀದಿಸಿದ ಸಮಯದಲ್ಲಿ ಹೆಗ್ಗಡಳ್ಳಿಯಲ್ಲಿ ವಾಸ ಮಾಡುತ್ತಿದ್ದ ವಾದಿಗಳಿಗೆ ಗೊತ್ತಿತ್ತು ಎಂದರೆ ಗೊತ್ತಿರಲಿಲ್ಲ. ಆ ಸಮಯದಲ್ಲಿ 6ನೇ ಪ್ರತಿವಾದಿಯು ಯಾರಿಂದಾದರೂ ತಕರಾರು ಇದೆಯೇ ಎಂದು ಕೇಳಿದ್ದರು ಆ ವಿಚಾರ ನನಗೂ ಗೊತ್ತಿತ್ತು ಎಂದರೆ ಸುಳ್ಳು. ನಾವೆಲ್ಲಾ ಸೇರಿ 6ನೇ ಪ್ರತಿವಾದಿಗೆ ಕ್ರಯ ಪತ್ರ ಬರೆಸಿಕೊಟ್ಟಿದ್ದೇವೆ ಎಂದರೆ ಸುಳ್ಳು. ಒಂದು ಜಮೀನು ಕೆ ಐ ಡಿ ಬಿ ಗೆ ಭೂ ಸ್ವಾದೀನವಾಗಿ ಅದರಿಂದ ಬಂದ ಪರಿಹಾರ ಹಣದಿಂದ ಈ ಆಸ್ತಿ ಖರೀದಿಸಿದ್ದಾರೆ ಎಂದರೆ ಸುಳ್ಳು. ನನಗೆ ಮತ್ತು ಪ್ರತಿವಾದಿಗಳಿಗೆ ತಿಳಿಸಿದ್ದಾರೆ ಎಂದರೆ ಸುಳ್ಳು. 6ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು 1 ರಿಂದ 5ನೇ ಪ್ರತಿವಾದಿಗಳು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಆದೇಶವಾದ ನಂತರ ಆಸ್ತಿಯ ಸ್ವಾಧೀನತೆಯನ್ನು ನಾವು ಪಡೆದುಕೊಂಡಿಲ್ಲ. ನ್ಯಾಯಾಲಯದ ಆದೇಶದ ನಂತರ ಪಹಣಿಯಲ್ಲಿ ನನ್ನ ಹೆಸರು ಬಂತು ಎಂದರೆ ಸರಿ. ನಮ್ಮ ಭಾಗದ ಆಸ್ತಿ ಹೊರತುಪಡಿಸಿ 6ನೇ ಪ್ರತಿವಾದಿ ಆಸ್ತಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಭಾಗಕ್ಕೆ ಬಂದ ಆಸ್ತಿ ಈಗಲೂ ಅದೇ ರೀತಿ ಇದೆ ಎಂದರೆ ಸುಳ್ಳು. 6ನೇ ಪ್ರತಿವಾದಿ ಈಗ ದಾವಾ ಆಸ್ತಿಯಲ್ಲಿ ಸ್ವಾದೀನ ಇದ್ದು ಬ್ಯಾಂಕ್ ನಿಂದ ಸಾಲ ಪಡೆದಿದ್ದಾರೆ ಎಂದರೆ ಸರಿ. ಆ ಕಾರಣ ಬೇರೆ ವಾದಿಗಳಿಗೆ ದಾವೆಯಲ್ಲಿ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.